# ತೇಜಸ್ವಿ ಕಥನ ಸಾಹಿತ್ಯದಲ್ಲಿ ಪ್ರಕೃತಿ ಮತ್ತು ಮನುಷ್ಯ ಲೋಕ

**ವನಜಾಕ್ಷಿ ಎಂ.**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ.

**Article Link: https://aksharasurya.com/2024/01/vanajakshi-m/**

## ABSTRACT:

ಪ್ರಕೃತಿ ಎಂದರೆ ಸಾಮಾನ್ಯವಾಗಿ ಎಲ್ಲರಿಗೂ ನೆನಪಾಗುವುದು ಕಾಡು, ಬೆಟ್ಟ, ಗುಡ್ಡ, ನದಿ, ಹಳ್ಳ, ಹಚ್ಚ ಹಸುರಿನ ಬೆಟ್ಟಗಳ ಸಾಲು, ಹರಿಯುವ ನೀರು ಹಾಗೂ ಅಲ್ಲಿನ ಜೀವಸಂಕುಲವೆಂದು ಹೇಳಬಹುದು. ಇಂತಹ ಸುಂದರವಾದ ಪ್ರಕೃತಿಯು ಹಲವಾರು ಸಾಹಿತಿಗಳಿಗೆ ಸ್ಫೂರ್ತಿಯ ಸೆಲೆಯಾಗಿದೆ. ಕವಿಯ ಪ್ರತಿಭೆ ಹಾಗೂ ಭಾವನೆಗಳು ಅಕ್ಷರಗಳಾಗಿ ಸಾಹಿತ್ಯವನ್ನು ಸೆಳೆಯುವಂತೆ ಮಾಡಿದೆ. ಪ್ರಕೃತಿಯನ್ನು ವಿಭಿನ್ನವಾದ ದೃಷ್ಟಿಕೋನಗಳಿಂದ ನೋಡಲು ಸೂಕ್ಷ್ಮ ಮನಸ್ಸಿನ ಕವಿಯಿಂದ ಮಾತ್ರ ಸಾಧ್ಯವಾಗುತ್ತದೆ. ಮಲೆನಾಡು ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾಗಿರುವಂತೆ, ಹಲವು ರಂಗಗಳಲ್ಲಿ ಸಾಧನೆ ಮಾಡಿದ ಸಾಧಕರ ಜನ್ಮಭೂಮಿಯೂ ಹೌದು. ಸಾಹಿತ್ಯ ಲೋಕಕ್ಕೂ ಸಹ ಮಲೆನಾಡಿನ ಕೊಡುಗೆ ಅಪಾರವಾದುದು. ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ, ರಾಷ್ಟ್ರಕವಿ ಕುವೆಂಪು, ಡಾ. ಯು. ಆರ್. ಅನಂತಮೂರ್ತಿ, ಪಿ. ಲಂಕೇಶ್, ತೇಜಸ್ವಿ ಹೀಗೆ ಸಾಹಿತ್ಯ ಲೋಕಕ್ಕೆ ಶ್ರೇಷ್ಠ ಕವಿಗಳನ್ನು ಕೊಡುಗೆಯಾಗಿ ಕೊಟ್ಟಿರುವ ನಾಡು ಮಲೆನಾಡು. ನವೋದಯ ಕಾಲಘಟ್ಟದ ಹರಿಕಾರರೆಂದು ಹೆಸರುವಾಸಿಯಾಗಿರುವ ಕನ್ನಡ ನಾಡಿನ ಹೆಮ್ಮೆಯ ಕವಿ ಕುವೆಂಪುರವರು ಹೊಸಗನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದವರು. ಇಂತಹ ಪ್ರಖ್ಯಾತ ಕವಿಯ ಜೇಷ್ಠ ಪುತ್ರನಾಗಿ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರು ಸಾಹಿತ್ಯ ಲೋಕದ ದಿಗ್ಗಜರಲ್ಲಿ ಒಬ್ಬರೆನಿಸಿದ್ದಾರೆ. ಮಲೆನಾಡಿನ ಪ್ರಕೃತಿಯ ಸೊಬಗಿಗೆ ಮನಸೋತು ಕೃಷಿ, ಶಿಕಾರಿ, ಮೀನು ಹಿಡಿಯುವುದು, ಛಾಯಾಗ್ರಹಣ, ಕಥೆಗಾರರಾಗಿ ಮತ್ತು ಕಾಂದಬರಿಕಾರರಾಗಿ ಹೀಗೆ ಹತ್ತು ಹಲವು ಪ್ರವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದರು.

## KEY WORDS:

ತೇಜಸ್ವಿ, ಪ್ರಕೃತಿ, ಮನುಷ್ಯ, ಸಂಬಂಧ, ಬದುಕು, ಕಥೆ, ಕಾದಂಬರಿ.

ತೇಜಸ್ವಿಯವರು ಪರಿಸರವನ್ನು ಪ್ರಾಕೃತಿಕ ಪರಿಸರ ಮತ್ತು ಸಾಮಾಜಿಕ ಪರಿಸರ ಎಂದು ಎರಡು ರೀತಿಯಲ್ಲಿ ಗುರುತಿಸುತ್ತಾರೆ. ಪ್ರಾಕೃತಿಕ ಪರಿಸರವೆಂದರೆ ಪ್ರಕೃತಿಯಲ್ಲಿ ಕಂಡಬರುವ ಪಕ್ಷಿ–ಪ್ರಾಣಿಗಳ ಚಲನವಲನಗಳು, ಅವುಗಳು ಬದುಕುವ ರೀತಿ, ಪರಿಸರದ ವರ್ತನೆಗಳನ್ನು ಗುರುತಿಸಬಹುದು. ಸಾಮಾಜಿಕ ಪರಿಸರವೆಂದರೆ ಇವರ ಸಾಹಿತ್ಯದಲ್ಲಿ ಬರುವ ವ್ಯಕ್ತಿಗಳಿಗೆ ಸಂಬಂಧಪಟ್ಟಿದ್ದು. ಅವರ ನಡೆ–ನುಡಿಗಳನ್ನು ಚಿತ್ರಿಸುವ ಪಾತ್ರ ಚಿತ್ರಣಗಳಲ್ಲಿ ಕಾಣಬಹುದು. ತೇಜಸ್ವಿ ಲೋಕದಲ್ಲಿ ಅತಿ ಸಾಮಾನ್ಯರು ಎಂದು ಎನಿಸಿಕೊಂಡವರಾದ ಹಾವು ಹಿಡಿಯುವವನು, ಮೀನು ಮಾರುವವರು, ತೋಟದಲ್ಲಿ ಕೆಲಸ ಮಾಡುವವರು, ಅಂಗಡಿಯಲ್ಲಿ ವ್ಯಾಪಾರ ಮಾಡುವವನು, ಪೋಸ್ಟ್‌ಮ್ಯಾನ್, ಕೆ.ಇ.ಬಿ. ಲೈನ್‌ಮ್ಯಾನ್, ಬಿರಿಯಾನಿ ಹೋಟೆಲ್ ನಡೆಸುವವನು ಹೀಗೆ ಸಾಮಾನ್ಯರಲ್ಲಿ ಅತಿ ಶ್ರೀಸಾಮಾನ್ಯರನ್ನು ತಮ್ಮ ಕಥೆ–ಕಾದಂಬರಿಗಳಲ್ಲಿ ಪಾತ್ರವಾಗಿಸುವಲ್ಲಿ ಪ್ರಮುಖ ಸ್ಥಾನ ಕೊಟ್ಟಿದ್ದಾರೆ. ತೇಜಸ್ವಿ ನಗರ ಪ್ರದೇಶಗಳಲ್ಲಿ ಬದುಕುವುದಕ್ಕಿಂತ ಗ್ರಾಮೀಣ ಬದುಕನ್ನು ಹೆಚ್ಚಾಗಿ ಇಷ್ಟಪಡುವವರು. ಇದರಿಂದಾಗಿಯೇ ಉನ್ನತ ವಿದ್ಯಾಭ್ಯಾಸ ಪಡೆದರೂ ನಂತರ ಯಾವುದೇ ಸರಕಾರಿ ನೌಕರಿಯ ಅಪೇಕ್ಷೆ ಇಲ್ಲದೆ, ಉಪನ್ಯಾಸ ವೃತ್ತಿಯಲ್ಲಿಯೂ ತೊಡಗದೆ ಕೃಷಿಯತ್ತ ಮುಖ ಮಾಡುತ್ತಾರೆ. ಕುವೆಂಪು ಹಳ್ಳಿಯಿಂದ ಬಂದು ನಗರದಲ್ಲಿ ಬದುಕನ್ನು ಕಟ್ಟಿಕೊಂಡರೆ, ತೇಜಸ್ವಿಯವರು ನಗರದಿಂದ ಬಂದು ಹಳ್ಳಿಯಲ್ಲಿ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಪೂರ್ಣಚಂದಿರನಂತೆ ಕಂಗೊಳಿಸುವ ತೇಜಸ್ವಿಯ ತೇಜಸ್ಸು ಪ್ರಕೃತಿಯಲ್ಲಿ ಬೆರೆತುಹೋಯಿತು. ಮೂಡಿಗೆರೆಯಲ್ಲಿ ಕಾಡು ತೆಗೆದುಕೊಂಡು ಕಾಫಿ ತೋಟ ಮಾಡಲು ನಿರ್ಧರಿಸಿದ್ದರು. "ನಾನು ಮಲೆನಾಡಿನ ಮೂಡಿಗೆರೆಯಲ್ಲಿ ಕಾಡು ತೆಗೆದುಕೊಂಡು ಕಾಫಿ ತೋಟ ಮಾಡಲು ನಿರ್ಧರಿಸಿದ್ದು, ವಾಸ್ತವಾಗಿ ಕಾಫಿ ತೋಟದ ಲಾಭಕ್ಕಾಗಲಿ, ಹಳ್ಳಿಗೆ ಹಿಂದಿರುಗುವ ಆದರ್ಶಕ್ಕಾಗಲಿ, ವ್ಯವಸಾಯದ ಮೇಲಿನ ಪ್ರೀತಿಯಿಂದಾಗಲಿ ಖಂಡಿತ ಅಲ್ಲ. ಯಾರ ಹಂಗೂ, ಭಯ, ಬೈಯ್ಗುಳಗಳ ಕಾಟವಿಲ್ಲದೆ ಕಾಡು ಮೇಡು ಅಲೆದಾಡಿಕೊಂಡು ಇರಬಹುದೆಂಬುದೇ ಬಹುಮುಖ್ಯ ಕಾರಣ" ಎಂದು ಪರಿಸರದ ಕತೆ ಸಂಕಲನದಲ್ಲಿ ತೇಜಸ್ವಿಯವರೆ ಹೇಳಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಗ್ರಾಮೀಣ ಪರಿಸರವನ್ನು ತೆಗೆದುಕೊಳ್ಳುತ್ತಾ ಅಲ್ಲಿನ ರೀತಿ–ನೀತಿ, ಜೀವನಶೈಲಿ, ವ್ಯಕ್ತಿಗಳ ಆಲೋಚನೆ, ಆಸಕ್ತಿ, ಅಭಿಪ್ರಾಯ, ಅವರ ಆಚಾರ–ವಿಚಾರ–ನಂಬಿಕೆ ಇವುಗಳನ್ನು ಇವರ ಸಾಹಿತ್ಯ ಕೃತಿಗಳಲ್ಲಿ ಗುರುತಿಸುತ್ತಾ ಹೋಗಬಹುದು.

ಪರಿಸರದಲ್ಲಿ ಬದುಕುವ ವ್ಯಕ್ತಿಗಳ ಬಗೆಗಿನ ನಿಲುವು ಅವರ ಬದುಕಿಗೆ ಸಂಬಂಧಿಸಿದ ಅಸ್ತಿತ್ವಗಳ ನೆಲೆಯನ್ನು ವಾಸ್ತವಿಕ ಜಗತ್ತಿನೊಂದಿಗೆ ನೋಡುವುದು

ಇವರ ಕಥೆಗಳಲ್ಲಿ ಮುಖ್ಯವಾಗುತ್ತದೆ. ತೇಜಸ್ವಿ ಪ್ರಕೃತಿಯನ್ನು ಹಿನ್ನಲೆಯಾಗಿಸಿಕೊಂಡು ಕೃತಿಗಳನ್ನು ಬರೆದವರಲ್ಲ, ಬದಲಾಗಿ "ಪ್ರಕೃತಿಯೆ ಅವರ ಕತೆ. ಪ್ರಕೃತಿಯನ್ನು ಕತೆಯಾಗಿಸುವಲ್ಲಿ ಅವರು ತನ್ನ ಸಂಕೀರ್ಣ ಸಾಹಿತ್ಯ ಪ್ರಕಾರಗಳಾದ ವಿಜ್ಞಾನದ ವಿಸ್ಮಯಗಳ ಕುರಿತಾದ ಬರವಣಿಗೆಯಲ್ಲಿ ಸಾಮಾನ್ಯವಾಗಿ ಕಾಣುವ ನೇರ ನಿರೂಪಣೆಯನ್ನು ಬಿಟ್ಟು ಕಲೆಗೆ ಸಹಜವಾದ ಕಾಡು ಹಾದಿಯನ್ನು ವಸ್ತುಶಃ ಹಿಡಿಯುತ್ತಾರೆ. ಅಲ್ಲಿ ಏರಿಳಿತಗಳಿವೆ. ಗುಡ್ಡ–ಹೊಳೆ–ಕಲ್ಲು–ಮುಳ್ಳು–ಮನುಷ್ಯ–ಪ್ರಾಣಿ–ಪಕ್ಷಿಗಳಿವೆ. ಕಿಕ್ಕಿರದ ಘಟನೆಗಳಿವೆ. ವಾಸ್ತವ ಚಿತ್ರಗಳಿವೆ. ಇಂತಹ ಹಲವು ಕೃತಿಗಳನ್ನು ತೇಜಸ್ವಿ ಕತೆ ಹಾಗೂ ಕಾದಂಬರಿಗಳ ಮೂಲಕ ನೀಡಿದ್ದಾರೆ. ಇತರರ ಕೈಯಲ್ಲಿ ಕಾಲ್ಪನಿಕ ಪ್ರವಾಸ ಕಥನವಾಗಬಲ್ಲ ವಸ್ತುವಿನ ಹಂದರವನ್ನು ತೇಜಸ್ವಿ ಯಶಸ್ವಿಯಾಗಿ ಕಥೆ ಕಾದಂಬರಿಯಾಗಿ ಹೇಳಬಲ್ಲರು ಎಂಬುದಕ್ಕೆ ಕರ್ವಾಲೋ, ನಿಗೂಢ ಮನುಷ್ಯರು, ಚಿದಂಬರ ರಹಸ್ಯ ಇವೆಲ್ಲವೂ ಸಾಬೀತು ಮಾಡಿವೆ".

ಕುವೆಂಪುರವರು ವರ್ಣಿಸಿದ ಪ್ರಕೃತಿ, ತೇಜಸ್ವಿಯವರು ಸೃಷ್ಠಿಸಿದ ಮಲೆನಾಡಿನ ಪ್ರಕೃತಿ ವರ್ಣನೆ ಸಮಾನವಾಗಿದ್ದರೂ ನೋಡುವ ದೃಷ್ಟಿ ಮಾತ್ರ ಬದಲಾಗಿದೆ. ಕುವೆಂಪು ಪ್ರಕೃತಿಯನ್ನು ತನ್ಮಯರಾಗಿ ಆಧ್ಯಾತ್ಮಿಕ ದೃಷ್ಟಿಕೋನದಿಂದ ವೀಕ್ಷಿಸುತ್ತಾ ಸಾಹಿತ್ಯದಲ್ಲಿ ಚಿತ್ರಿಸುತ್ತಾರೆ. ಕುವೆಂಪು ಪರಿಸರವನ್ನು ನೋಡಿ ದಿಗ್ಭ್ರಮೆಗೊಂಡು, ಆಧ್ಯಾತ್ಮಿಕದೆಡೆಗೆ ಹೋಗಿಬಿಡುತ್ತಾರೆ. ತೇಜಸ್ವಿ ಪರಿಸರವನ್ನು ತಟಸ್ಥರಾಗಿ ವೀಕ್ಷಿಸುತ್ತಾ ಅಲ್ಲಿ ಜೀವಿಸುವ ವಿವಿಧ ರೀತಿಯ ಕೀಟಗಳು, ಪಕ್ಷಿಗಳು, ವನ್ಯಜೀವಿಗಳ ಬದುಕನ್ನು ಸೂಕ್ಷ್ಮವಾಗಿ ಗ್ರಹಿಸುತ್ತಾ ವೈಜ್ಞಾನಿಕ ಅನ್ವೇಷಣಾ ಮನೋಭಾವದಿಂದ ಗಮನಿಸುತ್ತಾರೆ. ವೈಜ್ಞಾನಿಕತೆಯಿಂದ ಪ್ರಕೃತಿಯ ನಿಗೂಢತೆಗಳನ್ನು ತಿಳಿಯುವ ಮತ್ತು ಅದನ್ನು ಸಾಹಿತ್ಯದ ಮೂಲಕ ತಿಳಿಸುವ ಇವರ ಧೋರಣೆ ಕೌತುಕವಾದುದು. "ಸಂಸ್ಕೃತಿ, ನಾಗರಿಕತೆ ಎರಡೂ ನಿಸರ್ಗದ ಕೂಸುಗಳೆ, ಹೆಂಗರುಳಿನ ಸಂಸ್ಕೃತಿ ನಿಸರ್ಗವನ್ನು ಅನುಸರಿಸುತ್ತ ತಮ್ಮ ಬದುಕನ್ನು ಹಸನಾಗಿಸಲು ಯತ್ನಿಸಿದರೆ, ಗಂಡು ಪೊಗರಿನ ನಾಗರಿಕತೆ ಹಡೆದ ತಾಯಿಯನ್ನೇ ಗೋಳು ಹೊಯ್ದುಕೊಳ್ಳುವ, ಮಗನಂತೆ ನಿಸರ್ಗವನ್ನು ನುಂಗಿಹಾಕಲು ಅದರ ಆದಿಮ ತತ್ವವನ್ನು ಬುಡಮೇಲು ಮಾಡಲು ಹವಣಿಸುತ್ತದೆ. ನಿಸರ್ಗ ಮತ್ತು ನಾಗರಿಕತೆಯ ಕರುಳಬಳ್ಳಿಯ ಸಂಬಂಧ ಕಡಿಯದಂತೆ ಎಚ್ಚರಿಕೆ ವಹಿಸುವುದೆ ಎಲ್ಲ ಕಾಲದ ಎಲ್ಲ ದೇಶದ ಸಂಸ್ಕೃತಿವಂತರ ಲಕ್ಷಣ" ಎಂದು ಬಿದರಹಳ್ಳಿ ನರಸಿಂಹಮೂರ್ತಿ ಅವರು ಅಭಿಪ್ರಾಯ ಪಡುತ್ತಾರೆ.

ಮಾಯಾಲೋಕ–1 ತೇಜಸ್ವಿಯವರ ಕೊನೆಯ ಕಾದಂಬರಿಯಾಗಿದೆ. ಇದರಲ್ಲಿ ಮಾನವ ಪಾತ್ರಗಳು ಚಿತ್ರಿತಗೊಂಡಿರುವಂತೆಯೆ ಹುಂಡುಕೋಳಿಯ ಜೀವನಕ್ರಮ, ಮಂಗ, ಚಿಟ್ಟುಗಿಳಿ, ಮೀನು, ಏಡಿ, ಹಾವು, ಅಳಿಲು, ನವಿಲು,

ಕಾಡುಹಂದಿ ಮುಂತಾದವುಗಳ ಚಿತ್ರಣ ಬರುತ್ತದೆ. ದಾಸವಾಳ, ಮೆಣಸಿನಗಿಡ, ಮುಂತಾದ ಸಸ್ಯ ಸಂಪತ್ತು ಇಲ್ಲಿ ಮೂಡಿ ಬಂದಿವೆ. ಮನುಷ್ಯ ಮತ್ತು ಸಸ್ಯ–ಪ್ರಾಣಿ–ಕೀಟಗಳು ಜಗತ್ತನ್ನು ಏಕೀಭವಿಸುವಿಕೆಯ ಅನಾವರಣ ಆಗುತ್ತದೆ. ಕುತೂಹಲಭರಿತರಾಗಿ ಪ್ರಕೃತಿಯನ್ನು ಸೂಕ್ಷ್ಮವಾದ ನೋಟದಿಂದ ವೀಕ್ಷಿಸುವ ಗುಣ ತೇಜಸ್ವಿಯವರಿಗಿದೆ. ಪ್ರಕೃತಿಯಲ್ಲಿ ಪ್ರತಿಯೊಂದು ಜೀವಿಗೂ ತನ್ನದೇ ಆದ ಜೀವನಕ್ರಮವಿದೆ. ಕುತೂಹಲದಿಂದ ವೀಕ್ಷಿಸಿದರೆ ಪ್ರಕೃತಿಯಲ್ಲಿರುವ ಬೇರೆ–ಬೇರೆ ಜೀವಿಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಪ್ರಕೃತಿ ಮತ್ತು ಮನುಷ್ಯನನ್ನು ಬೇರೆ–ಬೇರೆಯಾಗಿ ನೋಡಲು ಸಾಧ್ಯವಿಲ್ಲ ಎಂಬುದನ್ನು ಇವರ ಸಾಹಿತ್ಯ ಕೃತಿಗಳ ಮೂಲಕ ಗುರುತಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಪ್ರಕೃತಿ ನಡವಳಿಕೆಯಲ್ಲೂ ಒಂದು ಕ್ರಮ ಇರುವಿಕೆಯನ್ನು ಪ್ರಕೃತಿಯ ಚಿತ್ರಣಗಳಲ್ಲಿ ಕಟ್ಟಿಕೊಡುತ್ತಾರೆ. ಲಂಟಾನ ಎನ್ನುವ ಪ್ರಕೃತಿಯ ಮತ್ತೊಂದು ಭಾಗವನ್ನು ಈ ಕಾದಂಬರಿಯಲ್ಲಿ ಗುರುತಿಸಲಾಗಿದೆ. ಲಂಟಾನಗಳು ಮಣ್ಣು ತೊಳೆದು ಹೋಗದ ಹಾಗೆ ಅದರ ಕಸಕಡ್ಡಿಗಳು ಮಣ್ಣಿನ ಜೈವಿಕ ವಸ್ತುಗಳು ಸೂರ್ಯನ ಬಿಸಿಲಿಂದ ಸುಟ್ಟು ಹೋದ ಹಾಗೆ ನೋಡಿಕೊಳ್ಳುತ್ತದೆ. ಇದರಡಿಯಿಂದಲೇ ನೇರಳೆ, ಹೊನ್ನೆ, ತೇಗ, ನೇರಳೆ, ಆಲ, ಧೂಪ ಮೊಳಕೆ ಒಡೆದು ಬೆಳೆಯುತ್ತವೆ. ಹೀಗೆ ಲಂಟಾನದ ವರ್ಣನೆ ಈ ಕಾದಂಬರಿಯಲ್ಲಿ ತೇಜಸ್ವಿ ಸೊಗಸಾಗಿ ಚಿತ್ರಿಸಿದ್ದಾರೆ.

ಹುಲಿಯೂರಿನ ಸರಹದ್ದು ಎಂಬ ಮೊದಲ ಕಥಾಸಂಕಲನದಲ್ಲಿನ 'ಲಿಂಗಬಂದ' ಕಥೆಯಲ್ಲಿ ಪ್ರಕೃತಿ ಮತ್ತು ಮಕ್ಕಳ ಮುಗ್ಧ ಮನಸ್ಸಿನ ಮುಗ್ಧತೆಯ ನಾನಾ ಮುಖಗಳನ್ನು ಪರಿಚಯಿಸುವಲ್ಲಿ ನಿಗೂಢತೆಯ ಇಲ್ಲಿನ ಚಿತ್ರಣ ದೈವದತ್ತಾದ ಪ್ರಕೃತಿಯ ಜೊತೆಗೆ ಮಲೆನಾಡಿನಲ್ಲಿ ಧಾರಾಕಾರವಾಗಿ ಸುರಿಯುವ ಮಳೆಯನ್ನು ತಮ್ಮ ಎಷ್ಟೋ ಕಥೆಗಳಲ್ಲಿ ವಿವರಿಸಿದ್ದಾರೆ. ಗ್ರಾಮೀಣತೆಯಲ್ಲಿ ಬಳಸುವ ಎಷ್ಟೋ ಕ್ರಿಯಾಚಟುವಟಿಕೆಯನ್ನು ಜೀವಂತಿಕೆಯಾಗಿ ಸೆರೆಹಿಡಿದಿದ್ದಾರೆ. ತೇಜಸ್ವಿಯವರು ಪ್ರಕೃತಿಯ ಪರಿಸರವನ್ನು ಚಿತ್ರಿಸುವುದಿಲ್ಲ. ಬದಲಾಗಿ ಆಧುನಿಕ ನಾಗರಿಕತೆಯಿಂದ ನಾಶವಾಗುತ್ತಿರುವ ಪರಿಸರದ ಕಡೆಗೆ ಹೆಚ್ಚಿನ ಒಲವಿದೆ. "ಹೊರಗಡೆ ಕತ್ತಲೋ ಕತ್ತಲು, ಶಬ್ದವೋ ಶಬ್ದ. ಗಾಳಿಯ ಭೋರೆನ್ನುವ ಸದ್ದು, ಮಳೆ ಹನಿ ಹಂಚಿನ ಮೇಲೆ ಉದುರುವ ಸದ್ದು, ದೂರದಲ್ಲಿ ಜೀರುಂಡೆಗಳ ಜೀ ಎನ್ನುವ ನಿರಂತರ ನಿನದೆ." ಕಿಟ್ಟಿ ಸುಭದ್ರೆಯ ಭಯಕ್ಕೆ ಮೂಲ ದೈತ್ಯಾಕಾರದ ಮಗುವಿನ ಬೆಳವಣಿಗೆಯಾದರೆ, ಅದಕ್ಕೆ ಪ್ರೇರಣೆ ಆ ಕತ್ತಲಿನ ರಾತ್ರಿಯಲ್ಲಿ ನಡೆಯುವ ಭಯಂಕರ ಘಟನೆಗಳಾಗಿವೆ. ಆಳು ಲಿಂಗ ಮಳೆ ಬರುವ ಸಂದರ್ಭದಲ್ಲಿ ಅವನ ಕೈಯಲ್ಲಿದ್ದ ದೊಡ್ಡ ಬಿದುರಿನ ಕೂಣಿಯನ್ನು ಇನ್ನೊಂದು ಕೈಯಲ್ಲಿ ಚೀಲವನ್ನೂ ಹಿಡಿದು ತಲೆಯ ಮೇಲೆ ಗೋಣಿ

ಚೀಲವೊಂದನ್ನು ಕವಿಚಿಕೊಂಡು ನಿಲ್ಲುವ ದೃಶ್ಯ ಗ್ರಾಮೀಣತೆಯ ನೆಲೆಯಲ್ಲಿ ಮಾತ್ರ ಕಾಣಲು ಸಾಧ್ಯ. ಅದನ್ನು ಚಿತ್ರಿಸುವಲ್ಲಿ ತೇಜಸ್ವಿ ಅವರ ವಿಶಿಷ್ಟತೆ ಅಡಗಿದೆ. "ಕಾರಂತರ ನಿಸರ್ಗ ಕಲ್ಪನೆಯಲ್ಲಿನ ಮನುಷ್ಯ ಮತ್ತು ಪ್ರಕೃತಿ ಸಂಬಂಧದ ಕಲ್ಪನೆ ಒಂದು ಮಹತ್ವದ ಸ್ತರದ್ದಾದರೆ, ಕುವೆಂಪು, ಬೇಂದ್ರೆಯವರ ಪ್ರಕೃತಿ ಚಿಂತನೆ ತಾಯ್ತನದ, ಮನುಷ್ಯನನ್ನು ಪೊರೆಯುವ, ಉನ್ನತೀಕರಣದತ್ತ ಒಯ್ಯುವ ನೆಲೆಯದಾಯಿತು. ಇವುಗಳ ಮಧ್ಯೆ ತೇಜಸ್ವಿ ಇಂಥ ಆಗಾಧ ಪರಿಸರವನ್ನು ಕಾಡಿನ ಚೈತನ್ಯವನ್ನು ರಕ್ಷಿಸಲೇಬೇಕಾದ ತುರ್ತು ಅಗತ್ಯವನ್ನು ಮನಗಂಡವರಾದರು".

'ಗುಡುಗು ಹೇಳಿದ್ದೇನು' ಈ ಕತೆಯಲ್ಲಿ ಮನುಷ್ಯನ ಆಸೆ ಅತಿಯಾಸೆ ಆದಾ ಗ ಆಗುವ ದುರಂತವನ್ನು ಚಿತ್ರಿಸುತ್ತದೆ. ವಾತ್ಸಲ್ಯಕ್ಕೆ, ಮಮತೆಗೆ ಪ್ರತಿ–ರೂಪವಾಗಿದ್ದ ಅಜ್ಜಿಯನ್ನು ಹಣದ ಆಸೆಗಾಗಿ ಕಾರಿಗೆ ಬಲಿಕೊಡುವ ಸೋಮಲಕ್ಕರ ಗುಣ–ಸ್ವಭಾವಗಳು ಇಂದಿನ ವಾಸ್ತವ ಜಗತ್ತಿಗೆ ಕನ್ನಡಿ ಹಿಡಿದ ಕಥೆಯಾಗಿದೆ. ಮನುಷ್ಯನ ಪ್ರತಿಯೊಂದು ಚಟುವಟಿಕೆಗಳು ಕ್ರಿಯಾರೂಪವಾಗಿ ನಿಲ್ಲುವುದು ಇಲ್ಲಿನ ಪ್ರಕೃತಿಯ ನಡುವೆಯ ಎಂಬುದನ್ನು ಇವರ ಪ್ರತಿಯೊಂದು ಕಥೆಗಳು ಹೇಳುತ್ತವೆ. ಪ್ರಕೃತಿಯ ನೈಸರ್ಗಿಕ ಚಿತ್ರಣದೊಂದಿಗೆ ಕಥೆ ಆರಂಭವಾಗುತ್ತದೆ. "ಹಗುರಾಗಿ ಹ–ರಿಯುತ್ತಿದ್ದ ನೂರಾರು ಮೋಡಗಳೆಡೆಯಲ್ಲಿ ಒಂದು ದೊಡ್ಡ ಮೋಡ ಸುಯ್ಯನೆ ತೇಲಿಬಂತು. ಒಂದು ಎದುರಿನ ಪರ್ವತಾಗ್ರಕ್ಕೆ ಮೃದುವಾಗಿ ಡಿಕ್ಕಿ ಹೊಡೆಯಿತು. ಮತ್ತು ಮುನ್ನುಗ್ಗಿತು. ಅಲ್ಲೇ ಮುದ್ದೆ ಮುದ್ದೆಯಾಗಿ ಸುರಳಿ ಸುತ್ತ ತೊಡಗಿ–ತು. ಸುರುಳಿ ಸುತ್ತಿ ಸುತ್ತಿ ಕೆಳಮುಖವಾಗಿ ಇಳಿದಿಳಿದು ಕೆಳಗೆ ಹಬ್ಬಿದ್ದ ಕಾಡಿನ ನಾಡಿನಾಡಿಯಲ್ಲಿ ಪ್ರವಹಿಸಿ, ಮರಮರಗಳ ಸಂದುಸಂದುಗಳಲ್ಲಿ ಅವಿತಿ–ದ್ದ ನಸುಗತ್ತಲ್ಲನ್ನು ಬಿಳಿದುಗೈದಿತು." ಇಲ್ಲಿ ಪ್ರಕೃತಿಯೊಂದಿಗೆ ಉದಯವಾಗುವ ಮನಷ್ಯನ ಸಂಬಂಧಗಳನ್ನು ಗುರುತಿಸಬಹುದು.

ಹುಲಿಯೂರಿನ ಸರಹದ್ದು ಕಥಾಸಂಕಲನದಲ್ಲಿನ 'ಊರ್ವಶಿ' ಕಥೆಯ ಕಾಥಾನಾಯಕ ಪುರಾಣ ಪ್ರಜ್ಞೆಯ ಮೂಲಕ ತನ್ನನ್ನು ಪುರೂರವನಾಗಿ ಅಲ್ಲಿನ ಸುಭದ್ರೆಯನ್ನು ಊರ್ವಶಿಯಾಗಿ ಕಲ್ಪಿಸಿಕೊಳ್ಳುತ್ತಾನೆ. ತಾನು ಪ್ರೇಮಿಸಿದ ಹುಡುಗಿಯೊಂದಿಗೆ ಮಾತನಾಡುವಾಗ ಆಕೆಯ ದೇಹರಚನೆಯನ್ನು ನೋಡುವಾಗ ಪ್ರಕೃತಿ ಇವರಿಬ್ಬರ ನಡುವೆ ಒಂದು ಸಂಬಂಧದ ಕೊಂಡಿಯಾಗಿ ಬೆಸೆಯುವಿಕೆಯನ್ನು ಚಿತ್ರಿಸಿದ್ದಾರೆ. "ಸೂರ್ಯ ಮುಳುಗಿದ ಆಕಾಶಕ್ಕೆ ಅವಮಾನವಾದಂತೆ ಮಂಜಿನ ಮಬ್ಬು ಕವಿಯುತ್ತಿತ್ತು. ಎಲ್ಲಿಂದಲೋ ಭತ್ತದ ವಾಸನೆ ಹೊತ್ತು ಗಾಳಿ ತುಂಗೆಯ ಮೇಲಿಂದ ಭರ್ರನೆ ತೂರಿಬಂದು ಸುಭದ್ರೆಯ ಕೆಂಪಂಚಿನ ಬಿಳಿ ಸೆರಗನ್ನು ದಿಗ್ಗನೆ ಎತ್ತಿತು. ಒಂದು ನಿಮಿಷದಲ್ಲಿ ಬೆಳ್ಳನೆಯ ಸೆರಗು ಹಡಗಿನ ಹಾಯಾಗಿ

ಬಿಳಿಯ ನಿಶಾನೆಯಂತಾಗಿ, ಕೌಪೀನದಂತಾಗಿ, ಟೇಪಿನಂತಾಗಿ, ದಾರದಂತಾಗಿ, ಸೋಮುವಿನೆದರು ಮಿಂಚಿತ್ತು." ಈ ರೀತಿ ಇವರ ಮಾತುಗಳು ಇವರ ನೋಟಗಳು ಇವೆಲ್ಲಕ್ಕೂ ಸೇರಿಯೇ ಹೊಂಚುಹಾಕಿ ಗಾಳಿ ಬೀಸಿತ್ತೆ? ಸೆರಗು ಮಿಂಚಿತ್ತೇ? ಎಂಬುದು ತಿಳಿಯಲಾರದು. ಮನುಷ್ಯ ಮತ್ತು ಪ್ರಕೃತಿಯ ನಡುವೆ ಇರುವ ಸಂಬಂಧವನ್ನು ಚಿತ್ರಿಸುವಲ್ಲಿ ತೇಜಸ್ವಿಯವರ ವಿಶೇಷತೆ ಇದೆ.

'ಅಬಚೂರಿನ ಪೋಸ್ಟಾಫೀಸ್' ಕಥಾ ಸಂಕಲನದಲ್ಲಿನ ಎರಡನೆಯ ಕಥೆ 'ಅವನತಿ'. ಈ ಕಥೆಯು ಸಂಪೂರ್ಣ ಗ್ರಾಮೀಣತೆಯ ನೆಲೆಯಲ್ಲಿ ರಚನೆಯಾದ ಕಥೆಯಾಗಿದೆ. ದಿನನಿತ್ಯ ನಡೆಯುತ್ತಿದ್ದ ಹಲವಾರು ಘಟನೆಗಳನ್ನು ಇದ್ದಂತೆಯೇ ಸ್ವೀಕರಿಸುವ ವ್ಯಕ್ತಿತ್ವದವರನ್ನು ತೋರಿಸುತ್ತದೆ. ಅವನತಿ ಕತೆಯಲ್ಲಿ ಗ್ರಾಮೀಣ ತೆಯ ಸಹಜ ಪರಿಸರವನ್ನು ಕಥೆಯ ಪಾತ್ರಗಳ ಹಿನ್ನೆಲೆಯಲ್ಲಿ ಕಟ್ಟಿಕೊಡುತ್ತಾರೆ. ತೇಜಸ್ವಿಯವರ ಕಥೆಗಳಲ್ಲಿ ಪ್ರಧಾನವಾಗಿ ಬರುವುದು ಮಳೆ ಸುರಿಯುತ್ತಿರುವ ವಾತಾವರಣದೊಂದಿಗೆ ಪಾತ್ರಗಳು ಅಲ್ಲಿನ ಸನ್ನಿವೇಶದೊಂದಿಗೆ ಸಂಭಾಷಣೆ ನಡೆಸುತ್ತದೆ. ಇತ್ತಾವರ ನಲವತ್ತು ಜನಸಂಖ್ಯೆಯ ಒಂದು ಪುಟ್ಟ ಹಳ್ಳಿ. ಇಲ್ಲಿ ವಿಸ್ತಾರವಾದ ಈಚಲು ಮರವಿದ್ದು, ಆ ದಾರಿಯಲ್ಲಿ ಹೆಂಗಸರು ನಡೆದುಕೊಂಡು ಹೋಗುವಾಗ ಧಾರಾಕಾರವಾಗಿ ಮಳೆ ಬೀಳುತ್ತಿದ್ದುದರಿಂದ ಕಂದುಬಣ್ಣದ ಗೊರಬು ಕೌಚಿಕೊಂಡಿದ್ದರು. ಸೀರೆಯನ್ನು ಮೇಲಕ್ಕೆ ಎತ್ತಿ ಕಟ್ಟಿದ್ದರಿಂದ ಹಿಂದಿನಿಂದ ನೋಡುವವರಿಗೆ ಕೇವಲ ಒಂದು ಗೊರಬು ಕೆಳಗ ಎರಡು ಬೆತ್ತಲೆ ಕಾಲುಗಳು ಕಾಣುತ್ತಿದ್ದವು. ಇಸಾಂಲ್ಪುರದಲ್ಲಿ ಇದ್ದ ಸೂರಾಚಾರಿ ಮತ್ತು ಈರೇಗೌಡ ಇಬ್ಬರೂ ಇಸ್ಲಾಂಪುರದಿಂದ ಹೊರಟಾಗ ಧಾರಾಕಾರವಾಗಿ ಮಳೆ ಸುರಿಯುತ್ತಿರುತ್ತದೆ. ಅವರ 'ಕೊಯಪಯ ಕೊಯಪಯ' ಮಾತುಗಳೊಂದಿಗೆ ಹೊರಟಿರುತ್ತಾರೆ. ನೈಸರ್ಗಿಕ ಪರಿಸರದಲ್ಲಿ ಬಳಸುವ ಪ್ರತಿಯೊಂದು ವಸ್ತುಗಳು ಕೂಡ ಗ್ರಾಮೀಣತೆಯ ನೆಲೆಯಿಂದಲೇ ಬಂದವುಗಳಾಗಿವೆ.

ತೇಜಸ್ವಿಯವರು ಮೂಲತಃ ಮಲೆನಾಡಿನಿಂದ ಬಂದವರಾಗಿರುವುದ ರಿಂದ ಅವರ ಕಥೆಗಳಲ್ಲಿಯೂ ಪ್ರಕೃತಿಯ ಸೊಗಡನ್ನು ಸಹಜವೆನ್ನುವ ರೀತಿಯಲ್ಲಿ ಚಿತ್ರಿಸಿದ್ದಾರೆ. 'ಕಿರಗೂರಿನ ಗಯ್ಯಾಳಿಗಳು' ಕಥೆ ಪ್ರಾರಂಭವಾಗುವುದೇ ಪ್ರಕೃತಿ ಸೌಂದರ್ಯದ ಸಹಜವಾಗಿ ಬೀಸುವ ಗಾಳಿಯಿಂದ. 'ಕಿರಗೂರಿನ ಹೆಣ್ಣುಮಕ್ಕಳು ಗದ್ದೆಯಲ್ಲಿ ಕಳೆ ಕೀಳುವಾಗಿನ ಚಿತ್ರಣ' ಗದ್ದೆ ನೀರಲ್ಲಿ ನೆನೆಯದಂತೆ ಸೀರೆ ಮೇಲೆತ್ತಿ ಕಟ್ಟಿಕೊಂಡು ತಮ್ಮ ದಂತದ ಕಂಬದಂತಿದ್ದ ಕಾಲುಗಳನ್ನು ನೀರಿನಲ್ಲಿ ಊರಿ ಕಳೆ ತೆಗೆಯುತ್ತಿದ್ದ ಹೆಂಗಸರು' ಅಲ್ಲಿನ ಸ್ತ್ರೀಯರ ಕ್ರಿಯಾಚಟುವಟಿ ಕೆಗಳನ್ನು ಗುರುತಿಸುತ್ತಾರೆ. ನಿರಂತರವಾಗಿ ಬೀಸುತ್ತಿದ್ದ ಗಾಳಿ ಅಲ್ಲಿದ್ದ ಹೆಂಗಸರ

ಮೇಲೆಯೆ ಹೆಚ್ಚು ಪ್ರಭಾವ ಬೀರುವಂತೆ ಕಾಣುತ್ತಿತ್ತು. ಗಾಳಿ ಹೊಡೆತಕ್ಕೆ ಓಲಾಡಿ ಗಿಡಮರಗಳಲ್ಲಿ ಸಾಷ್ಟಾಂಗ ಬಿದ್ದಂತೆ ನೆಲಮುಟ್ಟಿ ಮುಟ್ಟಿ ಏಳತೊಡಗಿದ್ದವು. ಕಥೆಯ ಆರಂಭದಲ್ಲಿಯೇ ಪ್ರಾಕೃತಿಕ ಸೌಂದರ್ಯದ ಭಾಗವಾದ ಗಾಳಿ ಬೀಸುವಿಕೆ ಹೊಸ ಬದಲಾವಣೆಗೆ ಪ್ರೇರಣೆ ನೀಡುವಂತಿತ್ತು. ಈ ಗಾಳಿಯ ನಡುವೆ ಪ್ರಕೃತಿಯಲ್ಲಿ ಬದುಕುವ ವ್ಯಕ್ತಿ ಇವೆರಡಕ್ಕೂ ಇರುವ ಸಂಬಂಧ ಸಂಕೀರ್ಣವಾದುದು. ಪ್ರಕೃತಿ ಮನುಷ್ಯನನ್ನು ಉಳಿಸಿ ಬೆಳೆಸಿ ಕಾಪಾಡುತ್ತಿರುತ್ತದೆ. ಆದರೆ ಅದೇ ಪ್ರಕೃತಿಗೆ ಮನುಷ್ಯ ನೀಡುವ ಕೊಡುಗೆ ಪ್ರಕೃತಿಯ ಸರ್ವನಾಶವಾಗಿದೆ. ಅನಾದಿಕಾಲದಿಂದಲೂ ಸಮಾಜ ಹೊಂದಿದ್ದ ನಂಬಿಕೆಯನ್ನು ಬಡಿದೆಬ್ಬಿಸುವ, ಗ್ರಾಮ ಸೇವಕ ಶಂಕರಪ್ಪನ ಬೋರ್ಡ್ ಪ್ರಕರಣ, ಹೆಬ್ಬಲಿಸನ ಮರ ಕೊಯ್ಯಲು ಬರುವ ಸೋನ್ಸ್ ಮತ್ತು ಮಲಯಾಳಿಗಳು, ಭೈರಪ್ಪ ಸುಬ್ಬೆಗೌಡ ಮತ್ತು ಕಾಳೇಗೌಡನ ಸೊಂಟದ ಉಳುಕಿನ ಪ್ರಸಂಗ, ಕಿರಗೂರಿನ ಗಂಡಸರ ಜೈಲುವಾಸದ ಅನುಭವಗಳು ಕಥೆಯಲ್ಲಿ ಒಂದಕ್ಕೊಂದು ಹೆಣೆಯಲ್ಪಟ್ಟಿವೆ. ಕಿರಗೂರಿನ ಆ ಐದು ಜನರಿಗೆ ಪೋಲೀಸ್ ಸ್ಟೇಷನ್ನಿನ ಜೈಲಿನಲ್ಲಿ ಆದ ನರಕ ಯಾತನೆಯು ಮತ್ತೆ ಜೀವನದಲ್ಲಿ ತಮ್ಮ ಊರನ್ನು ನೋಡುತ್ತೇವೆ ಎಂಬ ಅರಿವು ಇರಲಾರದಷ್ಟು ಕಷ್ಟವನ್ನು ಅನುಭವಿಸಿರುತ್ತಾರೆ. ಲಾಕಪ್ಪಿನಲ್ಲಿ ಜಾಗ ಇಲ್ಲದ್ದರಿಂದ ಅಪರಾತ್ರಿಯಲ್ಲಿ ಬಂಧನದಿಂದ ಐವರಿಗೂ ಮುಕ್ತಿಯಾಯಿತು. ತಮ್ಮ ಹಳ್ಳಿಗೆ ಮತ್ತೆ ಬರುವಾಗ ಅವರ ಮನಸ್ಸಿನಲ್ಲಿ ಪ್ರಕೃತಿಯ ಪ್ರತಿಯೊಂದು ಕಾರ್ಯವು ತನ್ನ ಪಾಡಿಗೆ ತಾನು ಯಥಾಪ್ರಕಾರ ನಿರಂತರವಾಗಿವುದನ್ನು ನೋಡುತ್ತಾರೆ. ಪ್ರಕೃತಿಯ ನಿಯಮ ಮನುಷ್ಯ ಹುಟ್ಟುವಾಗಲೂ ಹೀಗೆ, ಸತ್ತ ನಂತರವೂ ಮುಂದುವರೆಯುತ್ತದೆ. ಹುಟ್ಟು-ಸಾವು ಇವುಗಳ ಮಧ್ಯ ಪ್ರಕೃತಿಯಿಂದ ಅಪಾರವಾದುದನ್ನು ಪಡೆಯುತ್ತೇವೆ. ಆದರೆ ಅದರ ಬಲಿಗೆ ನಾವು ಪ್ರಕೃತಿಗೆ ನೀಡುವುದು ಶೂನ್ಯವಾಗಿದೆ. ತೇಜಸ್ವಿ ಕೃತಿಗಳಲ್ಲಿ ಪ್ರಕೃತಿದತ್ತವಾದ ಭೀಕರ ಗಾಳಿ, ಧಾರಾಕಾರವಾಗಿ ಬೀಳುವ ಮಳೆ, ನಿಯಂತ್ರಣಕ್ಕೆ ಸಿಗದ ಕಾಳ್ಗಿಚ್ಚು ಮತ್ತೆ-ಮತ್ತೆ ಕಾಣಿಸುತ್ತದೆ.

'ಕರ್ವಾಲೋ' ಕಾದಂಬರಿ ಬದುಕಿನ ವಿಸ್ಮಯವನ್ನು ಕುರಿತ ಕಾದಂಬರಿಯಾಗಿದೆ. "ಮನುಷ್ಯ ಪ್ರಕೃತಿ, ಮನುಷ್ಯ ಸಮಾಜ, ಮನುಷ್ಯ-ಮನುಷ್ಯರ ಸಂಬಂಧಗಳ ಸಂಕೀರ್ಣತೆಯಲ್ಲಿ ಅವುಗಳನ್ನು ಕೇವಲ ಬೌದ್ಧಿಕವಾಗಿ ಅರ್ಥೈಸಿಕೊಳ್ಳಲಾಗದ ಅನಿವಾರ್ಯತೆಯಲ್ಲಿ ಬುದ್ಧಿಯನ್ನು ಮೀರಿದ ನಿಗೂಢತೆಯಲ್ಲಿ ಬುದುಕು ನಮ್ಮೆಲ್ಲ ವಿಶ್ಲೇಷಣೆಗಳನ್ನು ಮೀರಿ ನಿಲ್ಲುತ್ತದೆ" ಎಂದು ಪ್ರಕೃತಿ ಮತ್ತು ಮನುಷ್ಯನಿಗಿರುವ ಸಂಬಂದವನ್ನು ಟಿ. ಪಿ. ಅಶೋಕ ಈ ರೀತಿಯಾಗಿ ವಿವರಿಸಿದ್ದಾರೆ. ಇಲ್ಲಿ ಬದುಕಿನ ಮೂಲಭೂತ ಅಂಶಗಳ ಬಗ್ಗೆ ಚಿಂತನಾಶೀಲನಾಗಿರಬೇಕಾಗುತ್ತದೆ. ಮನುಷ್ಯನನ್ನು ಪರಿಸರದಿಂದ ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ಪ್ರಕೃತಿಯಲ್ಲಿ

ಒಂದು ನಿರ್ಧಿಷ್ಟ ಸಂದರ್ಭದಲ್ಲಿ ಒಬ್ಬನಿಗೆ ಮುಖ್ಯವಾಗಿ ಕಾಣುವುದು ಮತ್ತೊಬ್ಬನಿಗೆ ಅಷ್ಟೊಂದು ಮುಖ್ಯವಾಗಿ ಕಾಣದಿರಬಹುದು. ಒಬ್ಬರಿಗೆ ಸಾಮಾನ್ಯವಾಗಿ ಕಾಣುವಂಥದ್ದು ಮತ್ತೊಬ್ಬನಿಗೆ ಅಸಮಾನ್ಯ ಎನಿಸಬಹುದು.

"ತೇಜಸ್ವಿ ಬರವಣಿಗೆ ಕೇವಲ ಮನುಷ್ಯ ಕೇಂದ್ರಿತವಲ್ಲ ಎನಿಸುತ್ತದೆ. ಅವರು ಮನುಷ್ಯನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಚಟುವಟಿಕೆಗಳನ್ನು ತುಂಬಾ ಸೂಕ್ಷ್ಮವಾಗಿ, ಸಂಕೀರ್ಣವಾಗಿ ವಿಶ್ಲೇಷಿಸುತ್ತಾರೆ ನಿಜ. ಆದರೆ ಮನುಷ್ಯನನ್ನೇ ಸೃಷ್ಠಿಯ ಕೇಂದ್ರವೆಂಬಂತೆ ನೋಡುವುದಿಲ್ಲ. ಅಥವಾ ಸೃಷ್ಠಿಯನ್ನು ಕೇವಲ ಮನುಷ್ಯನ ದೃಷ್ಟಿಕೋನದಿಂದ ನೋಡುವುದಿಲ್ಲ. ಅವರ ಮುಂದಿನ ಹಂತದ ಬರವಣಿಗೆಗಳಾದ 'ಕರ್ವಾಲೋ' 'ಚಿದಂಬರ ರಹಸ್ಯ' 'ಜುಗಾರಿ ಕ್ರಾಸ್' 'ಪರಿಸರದ ಕಥೆ' 'ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು' ಇಂಥ ಕೃತಿಗಳಲ್ಲಂತೂ ಮನುಷ್ಯ, ಒಟ್ಟಾರೆ ಜೀವಜಾಲ ವ್ಯವಸ್ಥೆಯ ಒಂದು ಅಂಗವಾಗಿ ಮಾತ್ರ ಮೂಡಿಬರುತ್ತಾನೆ. ಕನ್ನಡದ ಬಹುತೇಕ ನವ್ಯ ಬರಹಗಾರರಿಂದ ತೇಜಸ್ವಿ ನಿರ್ಣಾಯಕರಾಗಿ ಭಿನ್ನರಾಗುವುದು ಇಲ್ಲಿಯೇ." ತೇಜಸ್ವಿ ತಮ್ಮ ಜೀವನವನ್ನು ಹಾಗೂ ಬರವಣಿಗೆಯನ್ನು ಹೊಸದಾದ ರೀತಿಯಲ್ಲಿ ರೂಢಿಸಿಕೊಂಡರು. ಈ ಜಗತ್ತನ್ನು ಬದಲಾಯಿಸಲು ನನಗೆ ಸಾಧ್ಯವಿಲ್ಲದಿರಬಹುದು. ಆದರೆ ಅದನ್ನು ಅರಿಯುವುದೇ ಮನುಷ್ಯನ ಎಲ್ಲ ಕ್ರಿಯಾಶೀಲತೆಗಳ ನಿಜವಾದ ಪ್ರಯತ್ನ ಎಂದು ತೇಜಸ್ವಿ ಭಾವಿಸಿರುವಂತಿದೆ.

**ಪರಾಮರ್ಶನ ಗ್ರಂಥಗಳು:**

1. ಪೂರ್ಣಚಂದ್ರ ತೇಜಸ್ವಿ ಕೆ. ಪಿ. (2006) ಪರಿಸರದ ಕಥೆ. ಪುಸ್ತಕನ ಪ್ರಕಾಶನ. ಮೈಸೂರು.
2. ಪ್ರಹ್ಲಾದ್ ಡಿ. ವಿ. (ಸಂ). (2007). ತೇಜಸ್ವಿ ಲೋಕ. ಸಂಚಯ ಪ್ರಕಾಶನ. ಬೆಂಗಳೂರು.
3. ಚಂದ್ರೇಗೌಡ ಬಿ. (ಸಂ) ರಾಜು ಬಿ. ಎಲ್. (2007). ತೇಜಸ್ವಿ ನೆನಪು. ರಂಗ ಭಾರತಿ(ರಿ). ಬಳ್ಳಾರಿ.
4. ಅಶೋಕ ಟಿ. ಪಿ. (2010). ತೇಜಸ್ವಿ ಕಥನ. ಅಕ್ಷರ ಪ್ರಕಾಶನ. ಹೆಗ್ಗೋಡು, ಸಾಗರ.